

ಏನಾದ್ರ ಹಾಕಿದ್ರೆ, ನಲ್ಲಿಯಲ್ಲಿ ನಿಂತ ನೀರು ತೊಟ ತೊಟ ಅಂತ ಐದು ನಿಮಿಷಕ್ಕೊಂದು ಹನಿ ಸೋರುವಂತೆ ನಾಲ್ಕಾರು ಲೈಕು, ಕಮೆಂಟುಗಳು ಕಷ್ಟಪಟ್ಟು ಡೆಲಿವರಿ ಆಗುತ್ತೆ. ಅಷ್ಟಕ್ಕಾದ್ರೂ ತೃಪ್ತಿ ಪಟ್ಕೋಬೇಕು. ಈ ಲೈಕು, ಕಮೆಂಟುಗಳ್ಯಾವುದರಲ್ಲೂ ನನಗೆ ನಂಬಿಕೆಯಿಲ್ಲ. ನನ್ನ ಪಾಡಿಗೆ ಸುಮ್ಮನೆ ಏನಾದ್ರೂ ಪೋಸ್ಟ್ ಹಾಕ್ತೀನಿ ಅಂತಂದ್ರೋ, ಥೋ! ಅದಕ್ಕಿಂತ ನಗೆಪಾಟಲು ಮತ್ತೊಂದಿಲ್ಲ.

ಒಬ್ಬರ ಕಮೆಂಟುಗಳು ಮತ್ತೊಬ್ಬರಿಗೆ ಕಿರಿಕಿರಿಯೆನಿಸಿ ಅದು ಅತಿರೇಕಕ್ಕೂ ಹೋಗಿ ವಾಗ್ವಾದ, ಜಟಾಪಟಿ ನಡೆದು ಕೊನೆಗೆ ಅನ್‌ಫ್ರೆಂಡ್ ಆಗುವ ಹಂತಕ್ಕೂ ಹೋಗುವುದಿದೆ. ಇಂದಿನ ಪೋಸ್ಟ್‌ಗಳು ಮುಂದಿನ ಹಲವಾರು ವರ್ಷಗಳವರೆಗೆ 'ಮೆಮೊರೀಸ್' ಹೆಸರಿನಲ್ಲಿ ಫೇಸ್‌ಬುಕ್ ವಾಲ್‌ನಲ್ಲಿ ಮತ್ತೆ ಮತ್ತೆ ಅಂಟಿಕೊಂಡಾಗ, ಕೆಲವೊಂದು ಖುಷಿ ಕೊಟ್ಟರೂ ಕೆಲವು ಪುನರಾವರ್ತನೆಯ ಕಾರಣ ಓದಿದ್ದನ್ನೇ ಓದು ಕಿಸಬೈದಾಸ ಎನ್ನುವಂತೆ ಓದುಗರಿಗೆ ತಲೆನೋವು ಕೊಡದೇ ಇರುವುದಿಲ್ಲ. ಅದೇನೇ ಆಗಲಿ ಈ ಮೆಮೊರಿ ಪೋಸ್ಟ್‌ಗಳನ್ನು 'ಮತ್ತೆ ಓದಿ ಪ್ಲೀಸ್...' ಎನ್ನುವಂತೆ ಒಂದು ಸ್ಟೈಲಿ ತೇಪೆ ಹಾಕಿ ಮತ್ತೊಂದಿಷ್ಟು ಲೈಕು, ಕಮೆಂಟುಗಳನ್ನು ಜಮಾಯಿಸಿಕೊಳ್ಳುವ ಹುನ್ನಾರ ಅವಿತಿರುತ್ತದೆ ಎಂಬುದು ಮಾತ್ರ ಸುಳ್ಳಲ್ಲ. ಒಟ್ಟಿನಲ್ಲಿ ಈ ಲೈಕ್ಸ್ ಹಾಗೂ ಕಮೆಂಟ್ಸ್‌ಗಳನ್ನು ಆಸ್ವಾದಿಸುವುದೇ ದೊಡ್ಡ ವ್ಯಸನ.

ಲೈಕು, ಕಮೆಂಟುಗಳು ಕಥೆ ಇಷ್ಟಕ್ಕೇ ಮುಗಿಯುವುದಿಲ್ಲ. 'ಲೈಕ್' ಒತ್ತಿದವರೆಲ್ಲ ಆ ವಿಷಯಗಳನ್ನು ನಿಜವಾಗಲೂ ಓದಿರುತ್ತಾರೆಯೇ ಎಂಬ ಸಣ್ಣ ಗುಮಾನಿ ಹಲವು ಬಾರಿ ಕಾಡುತ್ತದೆ. ಕೆಲವು ದುಃಖಕರ ಸಂಗತಿಗಳನ್ನು ಕೆಲವರು ಹಂಚಿಕೊಂಡಿದ್ದಾಗ, ಉದಾಹರಣೆಗೆ ಯಾರೋ ತೀರಿಹೋದ ವಿಚಾರ ಅಥವಾ ಮತ್ಯಾರಿಗೋ ಹಾರ್ಟ್ ಅಟ್ಯಾಕ್ ಆಗಿದೆ ಎಂಬುದಕ್ಕೆಲ್ಲಾ ಸುಮ್ಮನೆ 'ಲೈಕ್' ಒತ್ತಿರುತ್ತಾರೆ. ಸಂದರ್ಭದ ಸೂಕ್ಷ್ಮತೆಯನ್ನು ಅರಿಯದಂಥ ಆತುರ!

ಇದೀಗ ಉದ್ದುದ್ದ ಬರಹಗಳನ್ನು ಓದುವ ತಾಳ್ಮೆ, ಸಮಯ ಕುಂಠಿತವಾಗಿದ್ದು, ಸಣ್ಣ ಬರಹಗಳು ಬೇಗನೆ ಸೆಳೆಯುತ್ತವೆ. ಇದೆಲ್ಲವನ್ನೂ ಬಿಟ್ಟು, ಒಂದು ಚಿತ್ರಪಟ ಲಗತ್ತಿಸಿದರೆ ಸಾಕು ಜಡಿಮಳೆಯಂಥ ಲೈಕು, ಕಮೆಂಟುಗಳು. ಇವುಗಳ ಮಧ್ಯೆ ಜನರು ಓದುವ ವ್ಯವಧಾನ ಕಳೆದುಕೊಳ್ಳುತ್ತಿದ್ದಾರೆಯೇ ಎಂಬ ಆಲೋಚನೆ ಮೂಡುತ್ತದೆ.

ಅನೇಕರು ಜಾಲತಾಣಗಳಲ್ಲಿ ಪ್ರತಿ ಕ್ಷಣವೂ ತಮ್ಮ ತಮ್ಮ ಸ್ಟೇಟಸ್ ಅಪ್ಡೇಟ್ ಮಾಡುತ್ತಲೇ ಇರುತ್ತಾರೆ. ಇಂಥ ಊರಿನಲ್ಲಿ ಇಂಥ ಹೋಟೆಲಿಗೆ ಚೆಕ್ ಇನ್ ಆದೆ, ರೈಲ್ವೆ ಸ್ಟೇಷನ್ನಿನಲ್ಲಿದ್ದೀನಿ, ವಿಮಾನದಲ್ಲಿ ಹೋಗ್ತಾಯಿದ್ದೀನಿ... ಹೀಗೆ ಇನ್ನೂ ಏನೇನೋ... ಒಂದಿಷ್ಟು ಲೈಕು, ಕಮೆಂಟುಗಳ ಮಧ್ಯೆ ಅದ್ಯಾವ ಕಿಂಡಿಯಿಂದ ಕಳ್ಳಕಾಕರು ನಿಮ್ಮ ಮನೆ ಗುಡಿಸಿ ಗುಂಡಾಂತರ ಮಾಡಲು ನಿಮ್ಮಿಂದಲೇ ಫ್ರೀ ಟಿಕೇಟು ಪಡೆದುಕೊಂಡಿರುತ್ತಾರೋ ಬಲ್ಲವರಾರು?. ಇಂಥ ಸಂದರ್ಭಗಳಿಂದ ಆಗುತ್ತಲಿರುವ ಅವಘಡಗಳ ಬಗ್ಗೆ ಸೈಬರ್ ಕ್ರೈಮ್ ಅಧಿಕಾರಿಗಳು ಎಚ್ಚರಿಕೆ ಗಂಟೆ ಬಾರಿಸುತ್ತಲೇ ಇದ್ದರೂ ನಾವು ಮಾತ್ರ ಕಿವಿಗೆ ಹತ್ತಿ ಇಟ್ಟುಕೊಂಡಿದ್ದೇವೆ.

ಇದೆಲ್ಲಾ ಬಿಡಿ, ಪುರುಷರು ತಮ್ಮ ಮನೆಮಂದಿಗೆ ಗುಡ್ ಮಾರ್ನಿಂಗ್, ಗುಡ್ ನೈಟ್ ಹೇಳುತ್ತಾರೋ ಇಲ್ಲವೋ, ಆದರೆ ನೇರವಾಗಿ ಬೇರೆ ಹೆಣ್ಮಕ್ಕಳ ಮೆಸೆಂಜರಿಗೆ ಲಗ್ಗೆ ಹಾಕಿ ಊಟ ಆಯ್ತಾ, ತಿಂಡಿ ತಿಂದಿರಾ ಎಂಬ ಕುಶಲೋಪಹರಿ ವ್ಯಕ್ತಪಡಿಸುತ್ತಾರೆ. ಎಲ್ಲರಿಗೂ ಕಾಣುವಂತೆ ಲೈಕು, ಕಮೆಂಟು ಮಾಡದೆ ಇನ್‌ಬಾಕ್ಸ್‌ಗೆ ಬಂದು ನಿಮ್ಮ ಪೋಸ್ಟ್ ಚಂದಿತ್ತು ಎನ್ನುತ್ತಾ ಮಾತಿಗೆಳೆಯಲು ಹವಣಿಸುತ್ತಾರೆ. ದಿನನಿತ್ಯದ ಇಂಥ ಕಿರಿಕಿರಿಗಳಿಂದ ಹೆಣ್ಣುಮಕ್ಕಳು ರೋಸಿ ಹೋಗಿರುವುದಂತೂ ಖಂಡಿತ.

ಫೇಸ್‌ಬುಕ್ ಗುಂಪುಗಾರಿಕೆಗೂ ಒಳ್ಳೆ ವೇದಿಕೆಯಾಗಿಬಿಟ್ಟಿದೆ. ಎಲ್ಲರೂ ಸ್ನೇಹವಲಯದಲ್ಲೇ ಇದ್ದರೂ, ಇಲ್ಲೂ ಒಂದಷ್ಟು ಪಂಗಡಗಳು ಎದ್ದು ಕಾಣುತ್ತವೆ. ಇಲ್ಲಿ ನಡೆಯುವ ಜಟಾಪಟಿಗಳಿಗೆ ಕೊನೆಮೊದಲೇ ಇರುವುದಿಲ್ಲ. ನೇರವಾಗಿ ಒಬ್ಬರ ಮೇಲೆ ವ್ಯಂಗ್ಯವಾಡಲು, ಕಿಡಿಕಾರಲು ಸಾಧ್ಯವಿಲ್ಲದ ಅತೃಪ್ತ ಜೀವಿಗಳು, ಪರೋಕ್ಷವಾಗಿ ತಮ್ಮ ಬರಹದ ಮೂಲಕ ಛಾಟಿ ಬೀಸಿ ತೃಪ್ತರಾಗುತ್ತಾರೆ.

ಇಷ್ಟೆಲ್ಲಾ ಯೋಚಿಸುತ್ತಾ ಒಮ್ಮೆ ಫೇಸ್‌ಬುಕ್ ಪೇಜ್‌ನಲ್ಲಿ ನಾನು ಮುಳುಗಿದ್ದಾಗ ನನ್ನ ಮಗಳು, 'ಅಮ್ಮಾ, ಯೂ ಆರ್ ಸ್ಟಿಲ್ ಸ್ಟಕ್ ಇನ್ ದಿಸ್ ಫೇಸ್ ಬುಕ್, ವೈ ಡೋಂಟ್ ಯೂ ಗೆಟ್ ಇನ್ಟು ಇನ್ಸ್ಟಾಗ್ರಾಂ ಲೈಕ್ ಅಸ್ ಯಂಗ್‌ಸ್ಟರ್ಸ್' ಎಂದಳು. ಓಹ್, ಅಂದ್ರೆ ಅವಳಾಗಲೇ ನನ್ನನ್ನು ಓಲ್ಡೀಸ್ ಲಿಸ್ಟ್‌ಗೆ ಸೇರಿಸಿದ್ದಳು. ಅವಳು ಫೇಸ್‌ಬುಕ್ಕನ್ನು ಇಷ್ಟೊಂದು ಅಲ್ಲಗಳೆಯುತ್ತಿರುವುದಕ್ಕೆ ಒಂದು ಕ್ಷಣ ದಂಗಾದರೂ ಸಾವರಿಸಿಕೊಂಡು, ಇಲ್ಲ ಪುಟ್ಟ, ವಿಷಯಗಳನ್ನು ಹಂಚಿಕೊಳ್ಳಲು ನನಗಿದೇ ಸರಿ ಎಂದಾಗ, ಅವಳು 'ವಾಟೆವರ್' ಎನ್ನುತ್ತಾ ಸಣ್ಣದಾಗಿ ಮೂತಿ ಕೊಂಕಿಸಿದ್ದಳು.

ಪ್ರತಿಕ್ರಿಯಿಸಿ: feedback@sudha.co.in